**ಉಡುಪಿ ತಾಲ್ಲೂಕು ಮೂಡುಗಿಳಿಯೂರು ಗ್ರಾಮಕ್ಕೆ ಶಾಲೆಯು ಮಂಜೂರಾತಿ**

589 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ತಾಲ್ಲೂಕು ಮೂಡುಗಿಳಿಯೂರು ಗ್ರಾಮದಲ್ಲಿ ಪ್ರೌಢಶಾಲೆಯ ಸೌಲಭ್ಯ ಕುರಿತಂತೆ ಸಾರ್ವಜನಿಕರು ಒತ್ತಾಯಿಸುತ್ತಿರುವುದು ನಿಜವಲ್ಲವೇ*

ಆ) *ಗ್ರಾಮದಲ್ಲಿ 94-95ರ ಶೈಕ್ಷಣಿಕ ವರ್ಷದಿಂದಲೇ ಪ್ರೌಢಶಾಲೆಯನ್ನು ಆರಂಭಿಸಲು ಸರ್ಕಾರ ಕ್ರಮ ಕೈಕೊಳ್ಳಬಹುದೇ*

ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಸ್ಥಳೀಯರಿಂದ ಇದುವರೆಗೆ ಯಾವುದೇ ಬೇಡಿಕೆ ಪತ್ರ ಬಂದಿರುವುದಿಲ್ಲ.

ಆ) 1994-95 ನೇ ಸಾಲಿನಲ್ಲಿ ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

**ಶಿಕಾರಿಪುರ ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು**

421 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕಾರಿಪುರ ತಾಲ್ಲೂಕಿನ ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಇಲ್ಲದೆ ಜನ ತೊಂದರೆಗೊಳಗಾಗಿರುವುದು ನಿಜವೇ?*

ಆ) *1993-94ನೇ ಸಾಲಿನಲ್ಲಿ ಸರಬರಾಜು ಆಗಬೇಕಾದ ಔಷಧಿಗಳು ಶಿಕಾರಿಪುರ ಜನರಲ್ ಆಸ್ಪತ್ರೆಗೆ ಇತರೆ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಔಷಧಿಗಳನ್ನು ಸರಬರಾಜು ಮಾಡಲಾಗಿದೆಯೇ?*

ಇ) *ಶಿಕಾರಿಪುರ ಜನರಲ್ ಆಸ್ಪತ್ರೆಗೆ 300 ಎಂ.ಎ. ಕ್ಷ-ಕಿರಣ ಅಗತ್ಯ ವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಈಗಿರುವ 100 ಎಂ.ಎ. ಕ್ಷ-ಕಿರಣ ರೋಗಿಗಳ ಅಗತ್ಯ ಪೂರೈಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):

ಅ) ಇದು ನಿಜವಲ್ಲ.

ಆ) ಸರ್ಕಾರಿ ಔಷಧಿ ಮಳಿಗೆಯಿಂದ ಸರಬರಾಜು (ಔಷದಿಗಳನ್ನು ಮಾಡಬೇಕಾದ ಶಿಕಾರಿಪುರ ತಾಲ್ಲೂಕಿನ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ) ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಕೆಳಕಂಡಂತೆ ಭಾಗಶಃ ಸರಬರಾಜು ಮಾಡಲಾಗಿದೆ. ಉಳಿದ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಂದ ಬೇಡಿಕೆಗಳು ಬಂದನಂತರ ತಕ್ಷಣ ಸರಬರಾಜು ಮಾಡಲಾಗುವುದು.

(ಸರಬರಾಜು ಪಟ್ಟಿಯನ್ನು ಲಗತ್ತಿಸಲಾಗಿದೆ)

ಇ) ಇಲ್ಲಾ

ಈ) ಇಲ್ಲಾ

1993-94ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ:ಘಟಕಗಳಿಗೆ ಔಷಧಿಗಳನ್ನು ಪೂರೈಸಿರುವ ವಿವರ

| ಕ್ರಮ ಸಂಖ್ಯೆ | ಸಂಸ್ಥೆಗಳು | ಅನುಧಾನ ಮೌಲ್ಯ ರೂ: | ಔಷಧಿಗಳ ಪೂರೈಕೆಯ ಮೌಲ್ಯ |
|---|---|---|---|
| 1. | ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ | 45,000-00 | 44,272-98 |
| 2. | ಪ್ರಾಥಮಿಕ ಆರೋಗ್ಯ ಕೇಂದ್ರ ಕಾಗಿನಲ್ಲಿ | 30,000-00 | 20,700-00 |
| 3. | " ಸುಣ್ಣದ ಕೊಪ್ಪ | 30,000-00 | 17,726-67 |
| 4. | " ಶಿರಾಳ ಕೊಪ್ಪ | 30,000-00 | 13,170-44 |
| 5. | " ಚಿಕ್ಕ ಜೋಗಿಪಳ್ಳಿ | 30,000-00 | 22,241-38 |
| 6. | " ಸಾಲೂರು | 30,000-00 | 13,254-35 |
| 7. | " ಚಿಕ್ಕಜಾಜೂರು | 30,000-00 | 13,105-18 |
| 8. | " ಘಟಕ : ಹೋತನಕಟ್ಟೆ | 30,000-00 | 19,147-92 |
| 9. | " " ಪಾರಿಗೆ | 30,000-00 | 19,147-92 |
| 10. | " " ಹಿತ್ತಾಲೆ | 30,000-00 | 19,147-92 |
| 11. | " " ಮರವಳ್ಳಿ | 30,000-00 | 19,147-92 |
| 12. | " " ಯಲಗೇರಾ | 30,000-00 | 19,147-92 |
| | **ಜಿಲ್ಲಾ ಪರಿಷತ್ತಿನ ವತಿಯಿಂದ ಸರಬರಾಜಾದ ಔಷದಿಗಳ ವಿವರ** | | |
| 1. | ತಾಲ್ಲೂಕು ಆಸ್ಪತ್ರೆ, ಶಿಕಾರಿಪುರ | 30,000-00 | 35,772-00 |
| 2. | ಶಿರಾಳಕೊಪ್ಪ | 20,000-00 | 9,155-00 |
| 3. | ಚಿಕ್ಕ ಜೋಗಿಪಳ್ಳಿ | 20,000-00 | 4,560-00 |
| 4. | ಸುಣ್ಣದ ಕೊಪ್ಪ | 20,000-00 | 16,920-00 |
| 5. | ಕಾಗಿನೆಲೆ | 20,000-00 | 5,271-00 |
| 6. | ಚಿಕ್ಕ ಜಂಬೂರು | 20,000-00 | 2,304-00 |

**ಹುಕ್ಕೇರಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು**

475 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು? ಹಾಗೂ ಅವುಗಳು ಯಾವ ಗ್ರಾಮಗಳಿಗೆ ಮಂಜೂರಾಗಿದೆ.

ಆ) ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆಯೇ?

ಇ) ಇಲ್ಲದೆ ಇದ್ದಲ್ಲಿ ವಿಳಂಬ ಆಗಲು ಕಾರಣವೇನು? ಮತ್ತು ಅವುಗಳನ್ನು ಪ್ರಾರಂಭಿಸಿ ಪೂರ್ತಿ ಗೊಳಿಸಲಾಗುವುದು.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :